ದಿನಾಂಕಃ 8.11.2019 ರಂದು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ ಪತಿವಾದಿ 2 ರವರ ಪರವಾಗಿ ವಕೀಲರಿಂದ, ಶ್ರೀ ಟಿಎಸ್‌ಕೆ ವಕೀಲರಿಂದ ,**

ವಾದಿಗಳು ಅಂದರೆ ಪಂಪನಗೌಡ ಹಾಗೂ ಶರಣಮ್ಮ ಇವರು 2014-15 ರಲ್ಲಿ ಸಾಲಕ್ಕಾಗಿ ನಮ್ಮ ಬ್ಯಾಂಕ್‌ಗೆ ಬಂದಿರುತ್ತಾರೆ ನಿರ್ದಿಷ್ಟವಾದ ದಿನಾಂಕ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅವರು ಆ ದಿನ ಯಾವ ಯಾವ ದಾಖಲೆಗಳೊಂದಿಗೆ ಬಂದಿದ್ದರು ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ಲೀಗಲ್ ಓಪಿನಿಯನ್ ನ ಪ್ರಕಾರ ನಾವು ಅವರಿಗೆ ಸಾಲ ಮಂಜೂರು ಮಾಡಿರುತ್ತೇವೆ. ಸದರಿ ಲೀಗಲ್ ಓಪಿನಿಯನ್ ನ್ನು ಯಾವ ದಿನಾಂಕದಂದು ಯಾವ ವಕೀಲರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಡಿ.ಎಸ್ ಭದ್ರಿನಾಥ ಎಂಬ ವಕೀಲರು ಕೊಟ್ಟಿರುತ್ತಾರೆ ಆದರೆ ದಿನಾಂಕ ಗೊತ್ತಿರುವುದಿಲ್ಲ.

ಲೀಗಲ್ ಓಪಿನಿಯನ್ ಆದ ನಂತರ ನಾವು ಸ್ಥಳ ಪರಿಶೀಲನೆಗೆಂದು ಹೋಗುತ್ತೇವೆ. ಸ್ಥಳ ಪರಿಶೀಲನೆಗೆಂದು ಯಾವ ದಿನಾಂಕದಂದು ನೀವು ಹೋಗಿದ್ದೀರಿ ಎಂದರೆ ಸಾಕ್ಷಿ ದಿನಾಂಕ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸ್ಥಳ ಪರಿಶೀಲನೆಗೆಂದು ಹೋದಾಗ ಪಂಪನಗೌಡ, ಶರಣಮ್ಮ ಹಾಗೂ ನಾನು ಇದ್ದೇವು. ಸ್ಥಳ ಪರಿಶೀಲನೆಗೆಂದು ಹೋದಾಗ ಸ್ಥಳದಲ್ಲಿ ಖಾಲಿ ನಿವೇಶನ ಇತ್ತು ಯಾವುದೇ ಕಟ್ಟಡ ಕಟ್ಟುವ ಹಂತದಲ್ಲಿರಲಿಲ್ಲ ಎಂದರೆ ಸಾಕ್ಷಿ ತಳಪಾಯ ಹಾಕುತ್ತಿದ್ದರು ಎಂದು ನುಡಿಯುತ್ತಾರೆ.

ನಿಪಿ-7 ನ್ನು ಯಾರು ತೆಗೆದರು ಎಂದರೆ ಸಾಕ್ಷಿ ಇಂಜಿನಿಯರ್ ರವರಾದ ಪಾಟೀಲ್ ಸುರೇಶ ಬಾಬು ಎಂಬುವರು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಾಟೀಲ್ ರವರುವ ನಮ್ಮ ಪ್ಯಾನೆಲ್ ಇಂಜಿನಿಯರ್ ಆಗಿದ್ದು ಮೌಲ್ಯ ಮಾಪನ ಪಟ್ಟಿಯನ್ನು ಅವರೇ ಕೊಟ್ಟಿರುತ್ತಾರೆ. ನಿಪಿ-18 ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಆದರೆ ಇಂಜಿನಿಯರ್ ರವರ ಸಹಿ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಮೌಲ್ಯ ಮಾಪನ ಪಟ್ಟಿಯನ್ನು ಇಂಜಿನಿಯರ್ ರವರು ಯಾವಾಗ ಕೊಟ್ಟರು ಎಂಬುವುದನ್ನು ನನಗೆ ಹೇಳಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ನಿಪಿ-3 ರಲ್ಲಿ ನಮ್ಮ ಬ್ಯಾಂಕ್‌ನ ಆರ್ಡ್‌ರ್ ನಂಬರ್ ಹಾಕಿಲ್ಲ ಎಂದರೆ ಸರಿ. ಸದರಿ ನಿಪಿ-3 ರನ್ನು ದಿ. 22.11.2013 ರಂದು ಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ದಾಖಲೆಯನ್ನು ಕೊಡುವುದಕ್ಕಿಂತೆ ಮೊದಲು ನನ್ನ ಕಡೆಯಿಂದ ಇರುವಂತಹ ದಾಖಲೆಗಳನ್ನು ಪರಿಶೀಲನೆ ಮಾಡಿಯೇ ಕೊಟ್ಟಿರುತ್ತೇನೆ. ಪ್ರತಿವಾದಿ 1 ರವರಿಗೆ ವಾದಿ 1 ರವರು ದಿ. 27.4.2013 ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ನಮಗೆ ನೀಡಿರುವ ಋಣಭಾರ ರಾಹಿತಿಯ ಪ್ರಮಾಣ ಪತ್ರದಲ್ಲಿ ಅದು ನಮೂದಾಗಿಲ್ಲ ಎಂದು ನುಡಿಯುತ್ತಾರೆ.

ನಿಪಿ-3 ನ್ನು ನೀಡುವ ಮೊದಲು ಆಸ್ತಿಗೆ ಸಂಬಂದಿಸಿದ ಋಣಭಾರ ರಾಹಿತಿಯ ಪ್ರಮಾಣ ಪತ್ರವನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಗಳಿಗೆ ನಮ್ಮ ಬ್ಯಾಂಕ್‌ನಿಂದ ಸಾಲ ನೀಡಿರುವುದಿಲ್ಲ. ವಾದಿಗಳಿಗೆ ಯಾವಾ ಕಾರಣಕ್ಕೆ ಸಾಲ ನೀಡಲು ಆಗುವುದಿಲ್ಲಎ ಂಬುದಾಗಿ ಯಾವ ದಿನಾಂಕಂದು ಮಾಹಿತಿ ನೀಡಿದ್ದಿರಾ ಎಂದರೆಸ ಾಕ್ಷಿ 2014 ನೇ ಸಾಲಿನಲ್ಲಿ ಮೇ ಅಥವಾ ಜೂನ್ ತಿಂಗಳಿನಲ್ಲಿ ನೀಡಿರಬಹುದು

ಎಂದು ನುಡಿಯುತ್ತಾರೆ. ವಾದಿ ಗಳಿಂದ ಪಡೆದ ಲೀಗಲ್ ಓಪಿನಿಯನ್ ಹಾಗೂ ಮೂಲ ದಾಖಲೆಗಳನ್ನು ಯಾವ ದಿನಾಂಕಂದು ಅವರಿಗೆ ವಾಪಸ್ಸು ನೀಡಿದ್ದೀರಿ ಎಂದರೆ ಸಾಕ್ಷಿ ಮೇ ಅಥವಾ ಜೂನ್ ತಿಂಗಳಿನಲ್ಲೆ ಇರಬಹುದು ಎಂದು ನುಡಿಯುತ್ತಾರೆ.

ವಾದಿಗಳು ನಮ್ಮ ಬ್ಯಾಂಕ್‌ಗೆ ಸಾಲದ ಅರ್ಜಿ ಕೊಡು ಸಮಯದಲ್ಲಾಗಲಿ, ನಾವು ಸ್ಥಳ ಪರಿಶೀಲನೆಗೆ ಹೋದ ಸಂದರ್ಭದಲ್ಲಾಗಲಿ ಲೀಗಲ್ ಓಪಿನಿಯನ್ ಹಾಗೂ ದಾಖಲೆಗಳನ್ನು ಪಡೆಯುವ ಸಂದರ್ಭದಲ್ಲಿ ದಾವಾ ಆಸ್ತಿ ಖಾಲಿ ನಿವೇಶನ ಇತ್ತು ಎಂದರೆ ಸಾಕ್ಷಿ ಲೀಗಲ್ ಓಪಿನಿಯನ್ ಸಮಯದಲ್ಲಿ ಹೇಗಿತ್ತೊ ಗೊತ್ತಿರುವುದಿಲ್ಲ ಆದರೆ ಸ್ಥಳ ಪರಿಶೀಲನೆಗೆಂದು ಹೋದ ಸಂದರ್ಭದಲ್ಲಿ ತಳಪಾಯದ ಹಂತದಲ್ಲಿತ್ತು ಎಂದು ಸಾಕ್ಷಿ ನುಡಿಯುತ್ತಾರೆ.

ವಾದಿಗಳು ಹಾಜರು ಪಡಿಸಿರುವ ಛಾಯ ಚಿತ್ರಗಳಲ್ಲಿ ಕೇವಲ ನಿಪಿ-7 ಎಂದು ಗುರುತಿಸಲಾದ ಛಾಯ ಚಿತ್ರಕ್ಕೆ ಮಾತ್ರ ದಿನಾಂಕ ಇರುತ್ತದೆ ಎಂದರೆ ಸರಿ. ವಾದಿಗಳ ಮಾತು ಕೇಳಿ ಮತ್ತು ಅವರಿಗೆ ಸಹಾಯ ವಾಗಲಿ ಎಂಬ ಉದ್ದೇಶದಿಂ ನಿಪಿ-3 ಹಾಗೂ 7 ನ್ನು ಸೃಷ್ಟಿ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಗಳಿಗೆ ಸಾಲ ಮಂಜೂರು ಮಾಡಲು ಆಗುವುದಿಲ್ಲ ಎಂದು ಗೊತ್ತಿದ್ದರು ನಿಪಿ-3 ರ ರೀತಿಯ ಹಿಂಬರಹ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡುವ ದೃಷ್ಟಿಯಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರುವಿಚಾರಣೆ ಃ ಇಲ್ಲ**

(ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

**ಓ ಹೇ ಕೇ ಸರಿ ಅದೆ ,**

**ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ**